Want of buildings for schools in Pandavapura Taluk.

Q.—191. **Sri B. Y. NEELE GOWDA** (Pandavapura).—

Will the Government be pleased to state :—

(*a*) the number of schools in Pandavapura Taluk which have no permanent buildings;

(*b*) whether the following villages have deposited in the Government their quota towards building fund :—

(i) Puttasomana Halli ;
(ii) Hagana Halli ;

(*c*) if they have deposited, the action taken by Government ;

(*d*) whether it has come to their notice that the school in Pattasomana Halli is being run in a temple ?

A.—**Sri A. G. RAMACHANDRA RAO** (Minister for Law and Education).—

(*a*) 38 schools out of 89 have no permanent buildings of their own. These schools are being held in temples and chavadis.

(*b*) Yes. As noted below :—

(i) Deposited ... Rs. 1,500
(ii) Deposited ... Rs. 1,000

(*c*) The estimates for the buildings at Puttasomanahalli and Haganahalli have been included in the Budget Estimates relating to primary school buildings for the year 1952-53. The construction work of the above buildings will be taken up as early as possible.

(*d*) The school at Puttasomanahalli is located in a private building.

ಶ್ರೀ ಬಿ. ವೈ. ನೀಲೇಗೌಡರು.— ಪಾಂಡವಪುರದಲ್ಲಿ 38 ಸ್ಕೂಲುಗಳಿಗೆ ಸ್ವಂತವಾದ ಖಾಯಂ ಕಟ್ಟಡಗಳಿಲ್ಲ ವೆಂದು ಹೇಳಿದ್ದೀರಿ. ಇವುಗಳ ಪೈಕಿ ಎಷ್ಟು ಸ್ಕೂಲು ಗಳ ಸಂಬಂದಲ್ಲಿ ಆಯಾ ಗ್ರಾಮಗಳವರು ತಮ್ಮ ಭಾಗದ ಹಣವನ್ನು ಕೊಟ್ಟಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್ ಬೇಕು.

ಶ್ರೀ ಬಿ. ವೈ. ನೀಲೇಗೌಡರು.—ಈ ವರ್ಷ ಈ 38 ಸ್ಕೂಲುಗಳ ಪೈಕಿ ಎಷ್ಟು ಸ್ಕೂಲುಗಳಿಗೆ ಕಟ್ಟಡ ಕಟ್ಟಿಸಿಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದನ್ನು ಲೆಕ್ಕಾಚಾರ ಮಾಡುತ್ತಿದ್ದೇವೆ. ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇವೆ.

ಶ್ರೀ ಬಿ. ವೈ. ನೀಲೇಗೌಡರು.—ಈ ಸ್ಕೂಲು ಕಟ್ಟಡ ಗಳನ್ನು ಕಟ್ಟಿಸುವುದರಲ್ಲಿ ಯಾವುದಾದರೊಂದು ನಿರ್ದಿಷ್ಟ ನೀತಿಯನ್ನನುಸರಿಸಿ preference ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು

ಶ್ರೀ ಬಿ. ವೈ. ನೀಲೇಗೌಡರು.—ಆ ನೀತಿ ಯೇನು ?

ಶ್ರೀ ಎ. ಜಿ. ರಾಮಚಂದ್ರರಾಯರು.—ಮೊದಲು ಯಾರು ಹಣವನ್ನು ಡಿಪಾಜಿಟ್ ಮಾಡುತ್ತಾರೆ; ಎಷ್ಟು ಹಣ ಡಿಪಾಜಿಟ್ ಮಾಡಿದ್ದಾರೆ, ಆ ಊರಿನಲ್ಲಿ ಅಗತ್ಯ ವೆಷ್ಟಿದೆ—ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳು ತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡರು (ಕುಣಿಗಲ್).—ತಾವು ಸ್ಕೂಲು ಬಿಲ್ಡಿಂಗ್‌ಗಳಿಗೆ ಈ ವರ್ಷ ಒದಗಿಸಿದ್ದೀರಲ್ಲಾ, ಇದು ಸಂಸ್ಥಾನದಲ್ಲಿ ಈ ವರೆಗೆ ಯಾರು ಡಿಪಾಜಿಟ್ ಮಾಡಿದ್ದಾರೋ ಅವರಿಗೆ ಗ್ರಾಂಟ್ ಕೊಡುವುದಕ್ಕೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅವರಿಗೆ preference ಕೊಡುತ್ತೇವೆ.

ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಇದುವರೆಗೆ ಗ್ರಾಂಟ್‌ಗಳನ್ನು ಕೊಟ್ಟಿರುವುದರಲ್ಲಿ ಆಯಾ ಗ್ರಾಮಗ ಳವರು ಕೊಟ್ಟಿರತಕ್ಕಂಥ ಕಾಂಟ್ರಿಬ್ಯೂಷನ್ ಮೇಲೆ ಕೊಟ್ಟಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅವರು ಕೊಟ್ಟಿರತಕ್ಕ ಕಂಟ್ರಿಬ್ಯೂಷನ್ ಮತ್ತು ಡಿಪಾಜಿಟ್ ಎಲ್ಲ ವನ್ನೂ ಗಮನಕ್ಕೆ ತೆಗೆದುಕೊಂಡು ಕೊಟ್ಟಿದೆ.

1 P.M.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಸ್ಕೂಲು ಕಟ್ಟಡಗಳನ್ನು ಕಟ್ಟಲು ಡಿಪಾಜಿಟ್ ಮಾಡ ತಕ್ಕ ಪೊಬಲಗನ್ನು, ಗ್ರಾಮಸ್ಥರು ತಾವೇ ಕಟ್ಟಿಕೊಳ್ಳು ತ್ತೇವೆಂದು ಕೇಳಿದರೆ, ಆ ಹಣವನ್ನು ಡಿ. ಇ. ಓ. ಅವರು ವಾಪಸು ಕೊಡುವುದಕ್ಕೆ ಕಾನೂನು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಮಾಡಿಲ್ಲ. ಅವರು ಕೊಟ್ಟು ಬಹಳ ವರ್ಷಗಳಾಗಿದ್ದರೆ, ತಾವೇ ಕಟ್ಟಿಕೊಳ್ಳುತ್ತೇವೆಂದರೆ, ಅವರು ಡಿಪಾಜಿಟ್ ಮಾಡಿರುವ ಹಣವನ್ನು ಪಡೆಯಲು ಅವಕಾಶ ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು (ಶಿವಮೊಗ್ಗ).—ದೇವಸ್ಥಾನಗಳಲ್ಲಿ ಶಾಲೆಗಳು ನಡೆಯುವುದರಿಂದ ಅಲ್ಲಿಗೆ ಹರಿಜನರ ಮಕ್ಕಳು ಬರುವುದಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—That does not arise.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಮಾಗಡಿ ತಾಲ್ಲೂಕಿನಲ್ಲಿ ಐದಾರು ಗ್ರಾಮಗಳವರು ಡಿಪಾಜಿಟ್ ಮಾಡಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಂದಿದೆ.

ಶ್ರೀ ಎಸ್. ಸಿದ್ದಪ್ಪನವರು.—ಅವುಗಳನ್ನು ಜಾಗ್ರತೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ತೆಗೆದು ಕೊಳ್ಳುತ್ತೇವೆ.

ಶ್ರೀ ಎಸ್. ಸಿದ್ದಪ್ಪನವರು.—ಅಲ್ಲಿ ಸ್ಕೂಲು ಕಟ್ಟಡ ಗಳ ಅಭಾವ ಹೆಚ್ಚೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಗೊತ್ತಿದೆ.